# ರಂಗಸ್ಥಳದ ಯುವರಾಜ

■ ಗಣಪತಿ ಹಾಸ್ಪುರ



ಬಂದನು ದೇವರ ದೇವಾ.... ಎನ್ನುವ ಸೊಗಸಾದ ಪದ್ಯ. ಭಾಗವತರು ಸುಶ್ರಾವ್ಯವಾಗಿ ಹಾಡಿದಾಗ ಕೃಷ್ಣ ವೇದಿಕೆಗೆ ಪ್ರವೇಶಿಸುತ್ತಾನೆ. ಆ ಕೃಷ್ಣನ ವೇಷಧಾರಿ ಪದ್ಯಕ್ಕೆ ಹೆಜ್ಜೆ ಹಾಕಿ, ಅವನದೇ ಹಾವಭಾವದಿಂದ ನರ್ತಿಸಿದಾಗೆಲ್ಲಾ.... ಇವರು ತೋಟಿಮನೆ ಅವರಲ್ವಾ ಎಂದು ಕಲಾಸಕ್ತರು ಗುರುತಿಸುವಷ್ಟರಮಟ್ಟಿಗೆ ಈ ಯಕ್ಷಪಟು ಪ್ರಸಿದ್ಧರು.

ಹೌದು, ತೋಟಿಮನೆಯ ಗಣಪತಿ ಹೆಗಡೆ ಈಗ ಪ್ರಮುಖ ಕಲಾವಿದರಲ್ಲಿ ಒಬ್ಬರು. ಯಾವುದೇ ಯಕ್ಷಗಾನ ಪ್ರಸಂಗವಿರಲಿ, ನಾಯಕನ ಪಾತ್ರವಿರಲಿ, ಖಳನಾಯಕನ ಪಾತ್ರವಿರಲಿ ಅದನ್ನು ಸಮರ್ಥವಾಗಿ ನಿಭಾಯಿಸುವ ಛಲ, ಸಾಮರ್ಥ್ಯ ಅವರಲ್ಲಿದೆ. ಪ್ರಸಂಗದ ಯಾವುದೇ ಪಾತ್ರವನ್ನು ನೀಡಿದರೂ, ಪ್ರೇಕ್ಷಕರಿಗೂ ಖುಷಿಯಾಗುವಂತೆ ಅವರು ಅಭಿನಯಿಸಬಲ್ಲರು. ರಂಗಭೂಮಿಯ ಕಲೆಯನ್ನು ಚೆನ್ನಾಗಿಯೇ ಅಭ್ಯಾಸ ಮಾಡಿಕೊಂಡಿರುವ ತೋಟಿಮನೆ ಅವರಿಗೆ ತಾವು ನಿರ್ವಹಿಸುವ ಪಾತ್ರಕ್ಕೆ ಜೀವ ತುಂಬುವ ತಾಕತ್ತು ಇದೆ.

## ರಂಗ ಪ್ರವೇಶ

ಉ. ಕ. ಜಿಲ್ಲೆಯ ಹೊನ್ನಾವರ ತಾಲೂಕಿನ ಸುರಕಟ್ಟೆ ಸನಿಹದ ತೋಟಿಮನೆಯ ಕೃಷಿಕರಾದ ದಿ. ಗೋವಿಂದ ಹೆಗಡೆ ಹಾಗೂ ದಿ. ಮಹಾದೇವಿ ದಂಪತಿಯ ಮಗ ಗಣಪತಿ ಹೆಗಡೆ. ಹೆತ್ತವರು ಕೃಷಿಯನ್ನೇ ಉಸಿರಾಗಿಸಿಕೊಂಡಿದ್ದರು. ಹಾಗಂತ, ಹೇಳಿಕೊಳ್ಳುವಷ್ಟು ಅನುಕೂಲವಂತರೇನೂ ಅವರಾಗಿರಲಿಲ್ಲ. ಅಂಥ ಮನೆತನದಲ್ಲಿ ಜನಿಸಿದ ಗಣಪತಿ ಹೆಗಡೆ ಅವರಿಗೆ ಆ ದಿನದಲ್ಲಿ ಎಸ್ ಎಸ್ಎಲ್ ಸಿ ಓದಿದ್ದೇ ದೊಡ್ಡ ಸಾಧನೆಯಾಗಿತ್ತು.

ಯಕ್ಷಗಾನದ ಬಗ್ಗೆ ಅಭಿಮಾನ ಹೊಂದಿದ್ದ ಬಾಲಕ ಗಣಪತಿಗೆ, ಆ ಕಲೆಯನ್ನು ರೂಢಿಸಿಕೊಳ್ಳಬೇಕೆಂಬ ಆಸೆ ಅಂಕುರಿಸಿತು. ತಮ್ಮ 16 ನೇ ವಯಸ್ಸಿನಲ್ಲಿಯೇ ಕಪ್ಪೆಕೆರೆಯ ಸುಬ್ರಾಯ ಭಾಗವತರಲ್ಲಿ ಯಕ್ಷಗಾನದ ಪ್ರಾಥಮಿಕ ಶಿಕ್ಷಣ ಕಲಿಯಲು ಆರಂಭಿಸಿದರು. ಸುಮಾರು ಐದು ವರ್ಷಗಳ ಕಾಲ ನಿರಂತರ ಪ್ರಯತ್ನದಿಂದ ಯಕ್ಷಕಲೆಯನ್ನು ಅಭ್ಯಾಸ ಮಾಡಿದರು.

1985 ರಲ್ಲಿ ಹೊನ್ನಾವರ ತಾಲೂಕಿನ ಗುಂಡಬಾಳದ ಶ್ರೀ ಮುಖ್ಯಪ್ರಾಣ ಯಕ್ಷಗಾನ ಮಂಡಳಿ ಸೇರಿಕೊಂಡರು. ವರುಷದ ಬಳಿಕ (1986 ರಲ್ಲಿ) ಶಿರಸಿಯ ಪಂಚಲಿಂಗೇಶ್ವರ ಯಕ್ಷಗಾನ ಮಂಡಳಿ ಸೇರಿ, ಬಾಲ ಗೋಪಾಲನ ವೇಷ, ಒಡ್ಡೋಲಗದ ಮೂಲಕ ರಂಗ ಪ್ರವೇಶಿಸಿದರು. ಮುಂದಿನ ಐದು ವರ್ಷಗಳ ಕಾಲ ಮತ್ತೆ ಗುಂಡಬಾಳದ ಮುಖ್ಯಪ್ರಾಣ ಯಕ್ಷಗಾನ ಮಂಡಳಿಯಲ್ಲಿ ಸೇವೆ ಸಲ್ಲಿಸಿದ ಇವರು, 1990 ರಿಂದ 6 ವರ್ಷಗಳ ಕಾಲ ಶಿರಸಿಯ ಮಾರಿಕಾಂಬಾ ಯಕ್ಷಗಾನ ತಂಡದ ಮೂಲಕ ಯಕ್ಷಸೇವೆಗೈದರು. ಆಮೇಲೆ 1996 ರಲ್ಲಿ ಮಂದರ್ತಿಯ ದುರ್ಗಾ ಪರಮೇಶ್ವರಿ ಯಕ್ಷಗಾನ ತಂಡ ಸೇರಿ ಕಲಾಸೇವೆ ಮಾಡಿದ ತೋಟಿಮನೆಯ ಗಣಪತಿ ಹೆಗಡೆ, 1997 ರಿಂದ ನಾಲ್ಕು ವರ್ಷಗಳ ಕಾಲ ಸಾಲಿಗ್ರಾಮದ ಮೇಳದಲ್ಲಿಯೂ ಸೇವೆ ಸಲ್ಲಿಸಿದ ಹೆಗ್ಗಳಿಕೆ ಇವರದ್ದು. 2002 ರಿಂದ ಪೂರ್ಣಚಂದ್ರ ಯಕ್ಷಗಾನ ಕಲಾ ಪ್ರತಿಷ್ಠಾನದಲ್ಲಿ ಮುಖ್ಯ ವೇಷಧಾರಿಯಾಗಿ ಅಭಿನಯಿಸುತ್ತಿದ್ದಾರೆ.

## ಯಕ್ಷಕಲೆಯೇ ಉಸಿರು

ತೋಟಿಮನೆ ಗಣಪತಿ ಹೆಗಡೆ ಯಕ್ಷಗಾನದ ಹಿರಿಕಿರಿಯ ಕಲಾವಿದರೊಂದಿಗೆ ಬೆರೆತು, ಯಕ್ಷಕಲೆಯನ್ನು ಚೆನ್ನಾಗಿಯೇ ಅಭ್ಯಾಸ ಮಾಡಿ, ಅದನ್ನೇ ಉಸಿರಾಗಿಸಿಕೊಂಡಿದ್ದಾರೆ. 'ಕೆರೆಮನೆ ಶಂಭು ಹೆಗಡೆ, ಮಹಾಬಲ ಹೆಗಡೆ, ಚಿಟ್ಟಾಣಿ, ಗೋಡೆ, ಕೊಂಡದಕುಳಿ, ಕೇಶವ ಕೋಳಗಿ.... ನನ್ನ ಮೆಚ್ಚಿನ ಕಲಾವಿದರು' ಎಂದು ತೋಟಿಮನೆ ಹೇಳುತ್ತಾರೆ.

ಕಳೆದ 26 ವರ್ಷಗಳಿಂದ ಯಕ್ಷಗಾನ ಕಲಾ ಸೇವೆ ಮಾಡುತ್ತಿರುವ ಇವರು ಜಿಲ್ಲೆ, ರಾಜ್ಯ ಹಾಗೂ ದೇಶದ ವಿವಿಧ ವೇದಿಕೆಗಳಲ್ಲಿ ಅಭಿನಯಿಸಿದ್ದಾರೆ. 2012 ರಲ್ಲಿ ಸಿಂಗಪುರ, 2013 ರಲ್ಲಿ ದುಬೈ, ಅಬುದಾಬಿ ಹಾಗೂ ಶಾರ್ಜಾದಲ್ಲಿ ಯಕ್ಷಕಲೆಯನ್ನು ಪ್ರದರ್ಶಿಸಿದ್ದಾರೆ.

ಈಗ ಕುಂಭಾಶಿಯ ಪೂರ್ಣಚಂದ್ರ ಯಕ್ಷಗಾನ ಕಲಾ ತಂಡದ ಮುಖ್ಯ ವೇಷಧಾರಿ ಆಗಿರುವ ಇವರು ಗದಾಯುದ್ಧ, ಮಾಗಧವಧೆ, ಕೃಷ್ಣ ಸಂಧಾನ, ಕೃಷ್ಣಾರ್ಜುನ ಕಾಳಗ, ದಕ್ಷಯಜ್ಞ, ಬ್ರಹ್ಮಕಪಾಲ, ಶರಸೇತು ಬಂಧ, ಭೀಷ್ಮ ವಿಜಯ... ಹೀಗೆ ಹಲವಾರು ಪ್ರಸಂಗಗಳಲ್ಲಿ ಮುಖ್ಯ ಪಾತ್ರದಲ್ಲಿಯೇ ಅಭಿನಯಿಸಿದ್ದಾರೆ. ಇವರಿಗೆ ಕೃಷ್ಣ, ಸುಧನ್ವ, ಮಾಗಧ, ರಾವಣ, ಭಸ್ಮಾಸುರ, ಆಂಜನೇಯ, ಸಾಲ್ವ, ವಿಶ್ವಾಮಿತ್ರ ಪಾತ್ರಗಳು ಹೆಸರು ತಂದುಕೊಟ್ಟಿದೆ.

ಯಕ್ಷ ಭೂಮಿಯಲ್ಲಿ ಕಲಾ ಸೇವೆ ಮಾಡುತ್ತಿರುವ ತೋಟಿಮನೆ ಗಣಪತಿ ಹೆಗಡೆ ಅವರಿಗೆ ಅನೇಕ ಸನ್ಮಾನ, ಬಿರುದುಗಳು ಅರಸಿ ಬಂದಿವೆ. ಇವರಿಗೆ ಯಕ್ಷಸುಂದರ, ನಟನಾ ಚೆಲುವ, ರಂಗಸ್ಥಳದ ಯುವರಾಜ, ನಟಪದ್ಮ ನೇಸರ ಬಿರುದುಗಳು ಸಂದಾಯವಾಗಿದೆ. ಶಿರಸಿ, ಹುಬ್ಬಳ್ಳಿ, ಬೆಂಗಳೂರು, ಹೊನ್ನಾವರ, ಶಿವಮೊಗ್ಗ, ಹೈದರಾಬಾದ.... ಮುಂತಾದ ಕಡೆಗಳಲ್ಲಿ ಸನ್ಮಾನಿತರಾಗಿದ್ದಾರೆ. 2003 ರಲ್ಲಿ ದಿ. ಕೊಂಡದಕುಳಿ ರಾಮ ಹೆಗಡೆ ಪ್ರಶಸ್ತಿಯೂ ಇವರ ಮುಡಿಗೇರಿದೆ. ■